SUGAR RESEARCH CENTRE AT BELGAUM

485. Sri S. H. Koujalagi (Bailhongal) .—Will the Minister of Industries be pleased to state :—

(a) Whether it has come to the notice of the Government that the highest number of Sugar Factories in the State are located in the State are located in Belgaum District ?

(b) If so, whether the Government would start a Sugar Research Centre at Belgaum ?

Sri S. M. Yahya (Industries Minister) .—

(a) Yes

(b) Starting of a Sugar Research Centre at Belgaum is under the active consideration of Government.

ಸಭೆಯಂ ಮಂಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ, ಯುವಜನ ಸೇವೆ, ಕ್ರೀಡೆಗಳು ಮತ್ತು ಕನ್ನಡ ಸಂಸ್ಕೃತಿ ಮಂತ್ರಿಯವರ ಪರವಾಗಿ).—೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೪೨(೩) ಕಲಮಿನ ಮೇರೆಗೆ ೧೯೮೬-೮೭ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯದ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ANNOUNCEMENT

Mr. Speaker .—Independent Members, Sriyuths L.R. Shivarame Gowda, T. B. Jayachandra Mallikarjuna Diwatar, Vijayakumar Elkal, Basavana Gowda and Vijayakumar Khandre have informed me that they have decided to pledge their support to the Government headed by Sri Veerendra Patil. They have also informed me that they don't intend to join the Congress Party.

ಮಂತ್ರಿಗಳ ಹೇಳಿಕೆ

ತುಮಕೂರು ಜಿಲ್ಲೆಯಲ್ಲಿ ಹಲವು ಗ್ರಾಮಂಗಳಲ್ಲಿ ವಾಂತಿ, ಬೇಧಿ (ಕರಳು ಬೇನೆ) ಮತ್ತು ಕಾಲರಾ ಪ್ರಕರಣಗಳು ಕಾಣಿಸಿಕೊಂಡಿರುವ ಬಗ್ಗೆ ಹಾಗೂ ಪ್ರತಿಬಂಧಕ ಕ್ರಮಗಳ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ .— (ಆರೋಗ್ಯ ಸಚಿವೆಯರ ಪರವಾಗಿ)

ತುಮಕೂರು ಜಿಲ್ಲೆಯ ೧೦ ತಾಲ್ಲೂಕುಗಳಲ್ಲಿನ, ೬ ತಾಲ್ಲೂಕುಗಳಲ್ಲಿ ದಿನಾಂಕ ೧-೬-೯೦ ರಿಂದ ಇದುವರೆವಿಗೂ ಅಂದರೆ, ದಿನಾಂಕ ೨೮-೬-೯೦ರವರೆಗೆ ೧೬೮ ವಾಂತಿ ಬೇಧಿ ಪ್ರಕರಣಗಳು ಕಾಣಿಸಿ ಕೊಂಡಿದ್ದು, ೬ ಜನರು ದೈವಾಧೀನರಾಗಿರುತ್ತಾರೆ. ದಿನಾಂಕ ೨೬-೬-೯೦ ರಿಂದ ಹೊಸ ಪ್ರಕರಣಗಳು ಕಂಡುಬಂದಿಲ್ಲ. ರೋಗದ ಮೊದಲನೆಯ ಪ್ರಕರಣ ದಿನಾಂಕ ೧-೬-೯೦ ರಂದು ತುರುವೇಕೆರೆ ತಾಲ್ಲೂಕಿನ ಅರಿಶಿನದ ಹಳ್ಳಿಯಲ್ಲಿ ಮತ್ತು ಕಡೆಯ ಪ್ರಕರಣ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ, ಹಂಳಿಯಾರದಲ್ಲಿ ವರದಿಯಾಗಿರುತ್ತದೆ. ಮೊದಲನೆಯ ಮರಣ ದಿನಾಂಕ ೧-೬-೯೦ ರಂದು ತುರುವೇಕೆರೆ ತಾಲ್ಲೂಕು ಬಾಣಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರದ ಕಲ್ಲುಬೋರನ ಹಳ್ಳಿಯಲ್ಲಿ ವರದಿಯಾಗಿರುತ್ತದೆ. ಕೊನೆಯ ಮರಣ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರ ಪ್ರಾಥಮಿಕ ಆರೋಗ್ಯ ಕೇಂದ್ರದ ಹೊನ್ನಯ್ಯನ ಪಾಳ್ಯದಲ್ಲಿ ದಿನಾಂಕ ೨೬-೬-೯೦ ರಂದು ಉಂಟಾಗಿರುತ್ತದೆ

ತುಮಕೂರು ಜಿಲ್ಲೆಯಲ್ಲಿ ಒಟ್ಟು ೧೬೮ ರೋಗಿಗಳಲ್ಲಿ, ೧೧೯ ರೋಗಿಗಳಿಂದ ಮಲವನ್ನು ಬೆಂಗಳೂರಿನಲ್ಲಿರುವ ಸಾರ್ವಜನಿಕ ಆರೋಗ್ಯ ಸಂಸ್ಥೆಯು, ಪ್ರಯೋಗಾಲಯದಲ್ಲಿ ಪರೀಕ್ಷಿಸಿ, ೨೭ ಮಾದರಿಗಳನ್ನು ಕಾಲರಾ ಪ್ರಕರಣಗಳೆಂದು ಗುರುತಿಸಲಾಗಿದೆ. ಈ ಕಾಲರಾ ಪ್ರಕರಣ ಎಂದು ಗುರ್ತಿಸಿದ ೨೭ ರೋಗಿಗಳು ಚಿಕಿತ್ಸೆಯನ್ನು ಪಡೆದು, ಸಂಪೂರ್ಣವಾಗಿ ಗುಣಮುಖರಾಗಿರುತ್ತಾರೆ. ಇವರಲ್ಲಿ ಯಾರೂ ಸತ್ತಿರುವುದಿಲ್ಲ.

ತುಮಕೂರು ಜಿಲ್ಲೆಯ ೨೫ ಗ್ರಾಮಗಳಲ್ಲಿ ಒಂದೊಂದು ರೋಗದ ಪ್ರಕರಣ ವರದಿಯಾಗಿದೆ' ಹೊಸ ಪ್ರಕರಣಗಳು ಕಾಣಿಸಿಕೊಂಡಿಲ್ಲ. ತುಮಕೂರು ಜಿಲ್ಲೆಯ ೩ ಗ್ರಾಮಗಳಲ್ಲಿ ಎರಡೆರಡು ರೋಗದ ಪ್ರಕರಣಗಳು ಕಾಣಿಸಿಕೊಂಡಿವೆ. ನಂತರ ಹೊಸ ಪ್ರಕರಣಗಳು ವರದಿಯಾಗಿಲ್ಲ. ಜಿಲ್ಲೆಯಲ್ಲಿ ೧೧ ಹಳ್ಳಿಗಳಲ್ಲಿ ೫ ರಿಂದ ಮೇಲ್ಪಟ್ಟು, ೧೫ ರೋಗದ ಪ್ರಕರಣಗಳವರೆಗೆ ಕಂಡು ಬಂದಿವೆ. ಮಧುಗಿರಿ ತಾಲ್ಲೂಕಿನ ಐ.ಡಿ. ಹಳ್ಳಿಯಲ್ಲಿ ಪರಿಸರದ ನೈರ್ಮಲ್ಯದ ಬಗ್ಗೆ, ಮಂಡಲ ಪಂಚಾಯತಿಯ ಗಮನವನ್ನು ಸೆಳೆಯಲಾಗಿದೆ. ಚಿಕ್ಕನಾಯಕನ ಹಳ್ಳಿಯಲ್ಲಿ ಹುಳಿಯಾರು ಗ್ರಾಮದಲ್ಲಿ ೫ ಪ್ರಕರಣಗಳು ಕಾಣಿಸಿಕೊಂಡಿದ್ದು, ೨ ಮರಣಗಳು ಉಂಟಾಗಿರುತ್ತವೆ. ಹೊನ್ನಮ್ಮನಪಾಳ್ಯದಲ್ಲಿ ೭ ಪ್ರಕರಣಗಳಲ್ಲಿ ೨ ಮರಣಗಳು ಉಂಟಾಗಿರುತ್ತವೆ.

ರೋಗ ಪ್ರತಿಬಂಧಕ ಕ್ರಮಗಳು;

(೧) ರೋಗಗ್ರಸ್ಥ ಹಳ್ಳಿಗಳಲ್ಲಿ ಹೊಸ ರೋಗಿಗಳನ್ನು ಗುರ್ತಿಸಲು ದೈನಂದಿಕ ಸಮೀಕ್ಷೆಯನ್ನು ಆರೋಗ್ಯ ಕಾರ್ಯಕರ್ತರಿಂದ ಮಾಡಿಸಲಾಗುತ್ತಿದೆ. ದಿನಂಪ್ರತಿ ಇವರು ಮನೆಗೆ ಭೇಟಿ ಕೊಟ್ಟು ಹೊಸ ಪ್ರಕರಣಗಳನ್ನು ಗುರ್ತಿಸಿ, ಚಿಕಿತ್ಸೆಗೆ ಸೂಕ್ತ ವ್ಯವಸ್ಥೆಯನ್ನು ಮಾಡಿರುತ್ತಾರೆ. ಪ್ರಕರಣಗಳು ವರದಿಯಾದ ಕೂಡಲೇ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ಉಪ-ವಿಭಾಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ರೋಗಗ್ರಸ್ಥ ತಾಲ್ಲೂಕು ಮತ್ತು ಗ್ರಾಮಗಳಿಗೆ ಭೇಟಿ ಕೊಟ್ಟು ಪ್ರತಿಬಂಧಕ ಕ್ರಮಗಳನ್ನು ಉಸ್ತುವಾರಿ ಮಾಡಿರುತ್ತಾರೆ.

(೨) ಆರು ರೋಗಿಗಳು ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಒಳ ರೋಗಿಗಳಾಗಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಇವರೆಲ್ಲರೂ ಗುಣಮುಖರಾಗಿರುತ್ತಾರೆ. ಹುಳಿಯಾರು ಆಸ್ಪತ್ರೆಯಲ್ಲಿ ೨೨ ರೋಗಿಗಳನ್ನು ಅಕ್ಕಪಕ್ಕದ ಗ್ರಾಮಗಳಿಂದ ಕರೆತಂದು ಚಿಕಿತ್ಸೆಯನ್ನು ಮಾಡಿಸಲಾಗಿದೆ. ಮಿಕ್ಕ ರೋಗಿಗಳು ಜಿಲ್ಲೆಯ ಇತರ ಆಸ್ಪತ್ರೆಗಳಲ್ಲಿಯೂ ಹಾಗೂ ಅವರು ವಾಸಿಸುತ್ತಿರುವ ಗ್ರಾಮಗಳಲ್ಲಿಯೇ ಅವರ ಮನೆಗಳಲ್ಲಿ ಚಿಕಿತ್ಸೆಯನ್ನು ಇಲಾಖೆಯ ಕಾರ್ಯಕರ್ತರ ಮೂಲಕ ಪಡೆದಿರುತ್ತಾರೆ.

(೩) ಜಿಲ್ಲೆಯ ೧೩೪ ಬಾವಿಗಳಿಗೆ ಮತ್ತು ಐ.ಡಿ. ಹಳ್ಳಿಯಲ್ಲಿರುವ ೧ ಕೊಂಟೆಗೆ ಚಲುವೆ ಪುಡಿಯನ್ನು (ಬ್ಲೀಚಿಂಗ್ ಪುಡಿಯನ್ನು) ಬಳಸಲಾಗಿದೆ. ಜಿಲ್ಲೆಯಲ್ಲಿರುವ ಆಸ್ಪತ್ರೆಗಳಿಗೆ ಮತ್ತು ಉಪ ಕೇಂದ್ರಗಳಿಗೆ ೮೪೦ ಒ. ಆರ್. ಎಸ್. ಪೊಟ್ಟಣಗಳನ್ನು ಮತ್ತು ವಾಂತಿ ಬೇಧಿ ತಡೆಗಟ್ಟುವ ಇತರ ಔಷಧಿಗಳನ್ನು ಸರಬರಾಜು ಮಾಡಿರುತ್ತಾರೆ ಮತ್ತು ಉಪಯೋಗಿಸಲಾಗಿದೆ.

(೪) ತುಮಕೂರು ಜಿಲ್ಲೆಯಲ್ಲಿ ಒಟ್ಟು ೨೨,೩೫೯ ಜನರಿಗೆ ಕಾಲರಾರೋಗದ ವಿರುದ್ಧ ಚುಚ್ಚು ಮದ್ದನ್ನು ಹಾಕಲಾಗಿದೆ. ರೋಗಿಗಳಿಂದ ಮಲಿನವಾದ ೨೪೮ ಮನೆಗಳಿಗೆ ಕ್ರಿಮಿನಾಶಕ ವಸ್ತುಗಳನ್ನು ಬಳಸಿ, ಸ್ವಚ್ಛ ಮತ್ತು ಸುರಕ್ಷಿತ ಮಾಡಲಾಗಿದೆ. ಈ ಪ್ರಕರಣದಿಂದ ರೋಗವನ್ನು ಒಬ್ಬರಿಂದ ಮತ್ತೊಬ್ಬರಿಗೆ ಹರಡದಂತೆ ನೋಡಿಕೊಳ್ಳಲಾಗಿದೆ. ದಿನಾಂಕ ೫-೬-೯೦ ರಂದು ತುಮಕೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ಸೂಚನೆಯಂತೆ, ೨೫,೮೦೦ ರೂ.ಗಳ ಔಷಧಿಗಳನ್ನು ಸರ್ಕಾರದ ಔಷಧಿ ಮಳಿಗೆಯಿಂದ ದಿನಾಂಕ ೫-೬-೯೦ ರಂದು ಸರಬರಾಜು ಮಾಡಲಾಗಿದೆ. ಇದರ ಜೊತೆಗೆ ಜಿಲ್ಲೆಯಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿಯೂ ವಾರ್ಷಿಕವಾಗಿ ಲಭ್ಯವಾಗಬೇಕಾಗಿರುವ ಔಷಧಿಗಳನ್ನು ಸರಬರಾಜು ಮಾಡಿ, ರೋಗದ ಪ್ರಕರಣಗಳನ್ನು ತಡೆಗಟ್ಟಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಕ್ರಮವನ್ನು ತೆಗೆದುಕೊಂಡಿರುತ್ತಾರೆ.

(೫) ಜಿಲ್ಲೆಯಲ್ಲಿ ಔಷಧಿ ದಾಸ್ತಾನು ತೃಪ್ತಿಕರವಾಗಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಂದ ಮತ್ತೆ ಬೇಡಿಕೆ ಬಂದಲ್ಲಿ, ತುರ್ತು ಔಷಧಿಗಳನ್ನು ಪೂರೈಸಲು ಸರ್ಕಾರದ ಔಷಧಿ ಉಗ್ರಾಣಕ್ಕೆ ಸೂಕ್ತ ಸೂಚನೆಯನ್ನು ಕೊಡಲಾಗುವುದು.

(ಬ) ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನಲ್ಲಿ ದಿನಾಂಕ ೮-೬-೯೦ ರಿಂದ ೧೪-೬-೯೦ ರವರೆಗೆ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿತ್ತು. ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯಾರು ಸುತ್ತಮುತ್ತಲ ಹಳ್ಳಿಗಳಲ್ಲಿ ದಿನಾಂಕ ೨೮-೬-೯೦ ರಿಂದ ೧೦-೭-೯೦ರವರೆಗೆ ನಿಷೇಧಾಜ್ಞೆಯನ್ನು ಜಾರಿಗೊಳಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ದಿನಾಂಕ ೨೮-೬-೯೦ ರಂದು ಜಿಲ್ಲಾಧಿಕಾರಿಗಳಿಗೆ ವಂನವಿಯನ್ನು ಸಲ್ಲಿಸಿರುತ್ತಾರೆ ಪ್ರಸ್ತುತ ಚಿಕ್ಕನಾಯಕನಹಳ್ಳಿ ತಾಲ್ಲೂಕು ಮ್ಯಾಜಿಸ್ಟೇಟರವರು ಈಗಾಗಲೇ ಪ್ರತಿಬಂಧಕಾಜ್ಞೆಯನ್ನು ದಿನಾಂಕ ೨೭-೬-೯೦ ರಿಂದ ಜಾರಿಗೊಳಿಸಿರುತ್ತಾರೆ.

(೭) ವಾಂತಿ ಬೇಧಿ ಪ್ರಕರಣಗಳನ್ನು ತಡೆಗಟ್ಟಲು, ಕಾಲರಾ ಲಸಿಕೆ ಒಂದೇ ಪರಿಣಾಮಕಾರಿ ಯಾಗಿರುವುದಿಲ್ಲ. ಲಸಿಕೆಯನ್ನು ಅವಶ್ಯಕತೆಯ ಮೇರೆಗೆ ಬಳಸಲಾಗುವುದು.

(೮) ಮೇಲಿನ ಪ್ರಕರಣಗಳಿಂದ ರೋಗವನ್ನು ಪೂರ್ಣ ಪ್ರಮಾಣದಲ್ಲಿ ತಹಬಂದಿಗೆ ತರುವ ಪ್ರಯತ್ನಗಳನ್ನು ಮಾಡಲಾಗಿದೆ,
ಚಿಕ್ಕನಾಯಕನಹಳ್ಳಿ ಮಾಧುಗಿರಿಯಲ್ಲಿ ವೈದ್ಯರು ಇಲ್ಲವೆಂದು ಹೇಳುತ್ತಿದ್ದರು ಅಲ್ಲಿಗೆ ವೈದ್ಯಾಧಿ ಕಾರಿಗಳನ್ನು ವಿಶೇಷವಾಗಿ ಕಳಿಸಲಾಗಿದೆ ಮತ್ತು ಈ ಬಗ್ಗೆ ಕೇಂದ್ರದ ಜಾಯಿಂಟ್ ಡೈರೆಕ್ಟರ್ ಕೂಡ ನಿನ್ನೆ ಭೇಟಿ ಮಾಡಿ ಏನೇನು ಸಮಸ್ಯೆ ಇದೆ ಅದಕ್ಕೆ ಬೇಕಾದಂತಹ ವರದಿಯನ್ನು ತರಿಸಿವ್ದಾರೆ. ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಮಂತ್ರಿಗಳು ಕಾಲರ ಬಗ್ಗೆ ಹೇಳಿಕೆ ನೀಡುತ್ತಿದ್ದಾರೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ಮಲೇರಿಯ ಹರಡಿದೆ. ಅದಕ್ಕೆ ಸರಿಯಾದಂಥ ಹಣವನ್ನು ನೀಡಿ ಪರಿಹಾರ ಕೊಟ್ಟಿಲ್ಲ.

ಅಧ್ಯಕ್ಷರು.—ನಿನ್ನೆ ಜಯಚಂದ್ರರವರು ಹೇಳಿದಂಥ ಪ್ರಶ್ನೆಗೆ ಅಂದರೆ ಕಾಲರ ಸಾಂಕ್ರಾಮಿಕದ ಬಗ್ಗೆ ಹೇಳಿಕೆ ಕೊಡುತ್ತಿದ್ದಾರೆ ನೀವು ಮಲೇರಿಯಾಕ್ಕೆ ಅದನ್ನು ತೆಗೆದುಕೊಂಡು ಹೋಗುತ್ತಿದ್ದೀರಿ.

ಶ್ರೀ ಕೆ. ಲಕ್ಕಪ್ಪ.—ಪುರ ನಾಲ್ಕು ತಿಂಗಳಿನಿಂದ ಅಲ್ಲಿ ಮಲೇರಿಯಾ ಹರಡುತ್ತಿದ್ದು ಇದರ ಬಗ್ಗೆ ಪತ್ರಿಕೆಯಲ್ಲಿ ಕೂಡ ಬಂದಿದೆ. It is a water based disease. On war footing ಇದನ್ನು ತಡೆಯುವುದಕ್ಕೆ ಕ್ರಮ ತೆಗೆದುಕೊಳ್ಳದೇ ಹೋದರೆ ಮತ್ತು ಕೊಳವೆ ಬಾವಿಗಳ ಮೂಲಕ ನೀರಿನ ವ್ಯವಸ್ಥೆ ಮಾಡದೇ ಹೋದರೆ ತುಮಕೂರು ಜಿಲ್ಲೆಯಲ್ಲಿ ನಾನಾ ರೀತಿಯ ರೋಗ ಹರಡುವುದಕ್ಕೆ ಅವಕಾಶವಾಗುತ್ತದೆ, ಇಲ್ಲಿ ಮಳೆ ಕಡಿಮೆಯಾಗಿ ಪರಿಸ್ಥಿತಿ ತುಂಬಾ ಹದಗೆಟ್ಟಿದೆ ಹೆಚ್ಚಿನ ಹಣವನ್ನು ಕೊಟ್ಟು ವೈದ್ಯರನ್ನು ಸಕಾಲಕ್ಕೆ ಅಲ್ಲಿಗೆ ಕಳಿಸಬೇಕು. ಅಲ್ಲಿರುವಂತಹ ಡಾಕ್ಟರ್ಸ್‌ಗಳು ಇದು ನೀರಿನಿಂದ ಬರತಕ್ಕಂತಹ ಖಾಯಿಲೆಯೆಂದು ಹೇಳುತ್ತಿದ್ದಾರೆ.

ಶ್ರೀ ಎ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಹೇಳಿದಂತಹ ಸೂಚನೆಗಳನ್ನು ಗಂಭೀರವಾಗಿ ಪರಿಶೀಲಿಸಿ ಅದನ್ನು ಜಾರಿಷ್ಟಾನ ಮಾಡಲಿಕ್ಕೆ ಪ್ರಯತ್ನಪಡುತ್ತೇನೆ. ಇದರಲ್ಲಿ ಹಣದ ಕೊರತೆ ಬೀಳುವುದಿಲ್ಲ ಮಾನ್ಯ ಸದಸ್ಯರು ಮಲೇರಿಯಾ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್‌ನಲ್ಲಿ ಕೂಡ ಬಂದಿದೆ. ೧೦೦೦ ಪ್ರಕರಣಗಳು ಅಂದರೆ ಇಂತಹ ರೋಗಿಗಳು ಆಸ್ಪತ್ರೆಗೆ ದಾಖಲಾಗಿದ್ದಾರೆಂದು ಇಲ್ಲಿ ಪ್ರಸ್ತಾಪವಾಗಿದೆ. ನಾವು ವರದಿಯನ್ನು ತರಿಸಿದ್ದೇವೆ ೧ ಸಾವಿರ ಮಲೇರಿಯಾ ರೋಗಿಗಳು ದಾಖಲಾಗಿದೆ ಎಂದು ಏನು ಬಂದಿದೆ ಅದು ಸತ್ಯಕ್ಕೆ ದೂರವಾದದ್ದು.

ಶ್ರೀ ಕೆ. ಲಕ್ಕಪ್ಪ.—ಅವರೆಲ್ಲರೂ ಸ್ಲಂನಲ್ಲಿರುವವರು. ನೀರಿನಿಂದ ಬರತಕ್ಕಂತಹ ಖಾಯಿಲೆ ಎಂದು ವೈದ್ಯರು ಹೇಳುತ್ತಿದ್ದಾರೆ. ಅಲ್ಲಿ ಹೆಚ್ಚು ಹಣವನ್ನು ಕೊಡಬೇಕು ಮತ್ತು ಡಾಕ್ಟರ್ಸ್‌ಗಳು ಏನು ಕಮಿಷನ್ ಇದ್ದಾರೆ ಅಲ್ಲಿಗೆ ವೈದ್ಯರನ್ನು ಹೆಚ್ಚು ಹಾಕುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಮಾನ್ಯ ಸೆಚಿವರು ಈ ಸದನದಲ್ಲಿ ಭರವಸೆ ಕೊಡಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಕಾಲರಾ ವಿಚಾರದಲ್ಲಿ ಇವತ್ತಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಮಾನ್ಯ ಸಚಿವರು ತುಮಕೂರು ಜಿಲ್ಲೆಗೆ ಮಾತ್ರ ಸೀಮಿತವಾಗಿ ೨-೩ ತಾಲ್ಲೂಕುಗಳಲ್ಲಿ ಕಾಲರ ಹೆಚ್ಚಿರುವುದಾಗಿ ಹೇಳಿ. ಇದರ ಬಗ್ಗೆ ಆರೋಗ್ಯ ಇಲಾಖೆಯವರು ಕೈಗೊಂಡಿರತಕ್ಕ ಕಾರ್ಯಕ್ರಮದ ಬಗ್ಗೆ ಸದನಕ್ಕೆ ತಿಳಿಸಿದ್ದಾರೆ. ಆದರೆ ಇವತ್ತು ವರದಿಯಾಗಿರುವಂತೆ ಮತ್ತು ನಿನ್ನೆಯ ದಿವಸ ಬೀದರ್‌ನಲ್ಲಿರತಕ್ಕ ಜಿಲ್ಲಾ ಪರಿಷತ್ ಅಧ್ಯಕ್ಷರ ಜೊತೆಯಲ್ಲಿ ನಾನು ಮಾತನಾಡಿ ತಿಳಿದುಕೊಂಡೆ, ಬೀದರ್ ನಲ್ಲಿಯೂ ಕೂಡ ೩ ಜನ ಸತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಗುರುಪಾದಪ್ಪನವರು ಪ್ರಸ್ತಾಪ ಮಾಡಿದ್ದಾರೆ. ರಾಜ್ಯದ ಅನೇಕಕಡೆಗಳಲ್ಲಿ ಈ ಕಾಲರಾ ರೋಗ ಬಹಳ ದೊಡ್ಡ ಪ್ರಮಾಣದಲ್ಲಿ

ಹಬ್ಬುತ್ತಿದೆಯೆಂದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ನಾನು ಸರ್ಕಾರಕ್ಕೆ ಆಗ್ರಹ ಪಡಿಸುವುದೇನೆಂದರೆ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು ಎಲ್ಲೆಲ್ಲಿ ಈ ರೋಗ ಕಾಣಿಸಿಕೊಂಡಿದೆ ಅಲ್ಲಿಯ ಸಂಬಂಧಪಟ್ಟ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಎನ್‌ಟೈರ್ ಮೆಷಿನರಿಯನ್ನು ಅಲರ್ಟ್ ಮಾಡಬೇಕು. ಏಕೆಂದರೆ ಇದು ಬಹಳ ಬೇಗ ಹರಡತಕ್ಕ ರೋಗ. ಆದ್ದರಿಂದ ಯಾವುಯಾವ ಜಿಲ್ಲೆಗಳಲ್ಲಿ ಈ ರೋಗ ಕಾಣಿಸಿಕೊಂಡಿದೆ ಅಲ್ಲೆಲ್ಲಾ ಅಲರ್ಟ್ ಮಾಡಿಸಬೇಕೆಂದು ಆಗ್ರಹಪಡಿಸುತ್ತಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಸಭಾಧ್ಯಕ್ಷರೆ, ಸರ್ಕಾರದವರು ಮುಂಜಾಗರೂಕತೆ ಕ್ರಮವನ್ನು ಕೈಗೊಂಡಿರುವುದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಕಾಲರಾ ಪೀಡಿತ ಪ್ರದೇಶಗಳಲ್ಲಿ ಇರುವ ಎಳನಾದು, ಬುಕ್ಕಾಪಟ್ಟಣ, ದೊಡ್ಡ ಅಗ್ರಹಾರ ಮತ್ತು ನೇರಲಗುಡ್ಡ ಈ ೪ ಆಸ್ಪತ್ರೆಗಳಲ್ಲಿ ಒಬ್ಬರೂ ದೊಡ್ಡ ವೈದ್ಯರು ಇಲ್ಲ. ಅಲ್ಲಿಗೆ ಯಾವ ವೈದ್ಯರನ್ನೂ ಪೋಸ್ಟ್ ಮಾಡಿಲ್ಲ. ನೀವು ಇವತ್ತು ಸದನದಲ್ಲಿ ಕೊಟ್ಟಿರತಕ್ಕ ಆಶ್ವಾಸನೆಯ ಪ್ರಕಾರವೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹೋದರೂ ಅಲ್ಲಿ ವೈದ್ಯರೇ ಇಲ್ಲದಿದ್ದರೆ ಯಾವರೀತಿ ಇದು ಫಲಪ್ರದವಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಅಲ್ಲದೆ ನೀವು ಒಂದುವೇಳೆ ಕಾರ್ಯಕ್ರಮ ಹಾಕಿಕೊಂಡರೂ ಕೂಡ ಸುಮಾರು ೧ ವಾರಕಾಲ ಹಾಕಿಕೊಳ್ಳಬಹುದು. ಅನಂತರ ಇದನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಾನು ಹೇಳಿದ ಈ ೪ ಊರುಗಳು ಯಾವಾಗಲೂ ಕಾಲರಾ ಪೀಡಿತ ಪ್ರದೇಶಗಳಾಗಿದ್ದರೂ ಕೂಡ ಕಳೆದ ಸುಮಾರು ೬ ವರ್ಷಗಳಿಂದ ಅಲ್ಲಿಗೆ ವೈದ್ಯರನ್ನೇ ಪೋಸ್ಟ್ ಮಾಡಿಲ್ಲ. ಆದ್ದರಿಂದ ಈಗಲಾದರೂ ಅಲ್ಲಿಗೆ ವೈದ್ಯರನ್ನು ನೇಮಕ ಮಾಡುವ ಕ್ರಮವನ್ನು ತಕ್ಷಣ ತೆಗೆದ ಕೊಳ್ಳಬೇಕು. ಮತ್ತು ಈ ಪ್ರದೇಶಗಳಲ್ಲಿ ಸಂಪೂರ್ಣವಾಗಿ ಕಾಲರ ಇಲ್ಲವೇ ಇಲ್ಲ ಎನ್ನುವವರೆಗೂ ನೀವು ಈ ಕಾರ್ಯಕ್ರಮಗಳನ್ನು ಅಲ್ಲಿ ನಿಲ್ಲಿಸಲೇಬಾರದೆಂದು ತಿಳಿಸ ಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ದೊಡ್ಡ ಅಗ್ರಹಾರದಲ್ಲಿ ಒಂದು ವೈದ್ಯರ ಹುದ್ದೆ ಖಾಲಿ ಇದೆ. ಇದನ್ನು ಭರ್ತಿ ಮಾಡಿಸುವ ಪ್ರಯತ್ನವನ್ನು ಕೂಡಲೇ ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ.—ಕೇವಲ ದೊಡ್ಡ ಅಗ್ರಹಾರದಲ್ಲಿ ಮಾತ್ರವಲ್ಲ. ಎಳನಾದು ಬುಕ್ಕಾಪಟ್ಟಣ, ದೊಡ್ಡ ಅಗ್ರಹಾರ ಮತ್ತು ನೇರಲಗುಡ್ಡ ಈ ೪ ಆಸ್ಪತ್ರೆಗಳಲ್ಲೂ ಕೂಡ ವೈದ್ಯರ ಇಲ್ಲ. ಆದ್ದರಿಂದ ಕೂಡಲೇ ಈ ಎಲ್ಲಾ ಆಸ್ಪತ್ರೆಗಳಿಗೂ ವೈದ್ಯರನ್ನು ನೇಮಿಸುವ ಕೆಲಸ ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಶಿರಾದಲ್ಲಿ ನಮ್ಮ ವರದಿಯ ಪ್ರಕಾರ ಒಂದು ಪೋಸ್ಟ್ ಖಾಲಿ ಇದೆ. ದೊಡ್ಡ ಅಗ್ರಹಾರದಲ್ಲಿ ನೇರಲಗುಡ್ಡದಲ್ಲಿ ಒಂದೊಂದು ಹುದ್ದೆಗಳು ಖಾಲಿ ಇವೆ.

ಶ್ರೀ ಟಿ. ಬಿ. ಜಯಚಂದ್ರ.—ಚಿಕ್ಕನಾಯ್ಕನಹಳ್ಳಿ ತಾಲ್ಲೂಕೂ ಕೂಡ ನನ್ನ ಕ್ಷೇತ್ರಕ್ಕೆ ಬರುತ್ತದೆ. ಅಲ್ಲಿ.....

ಶ್ರೀ ಎಂ. ವೀರಪ್ಪಮೊಯಿಲಿ.—ಎಲ್ಲೆಲ್ಲಿ ಡಾಕ್ಟರ್‌ಗಳ ಹುದ್ದೆಗಳು ಖಾಲಿ ಇವೆ (ಎಳನಾದು ಬುಕ್ಕಾಪಟ್ಟಣ ನೇರಲ ಗುಡ್ಡ, ದೊಡ್ಡ ಅಗ್ರಹಾರ), ಅಲ್ಲಿಗೆ ವೈದ್ಯರುಗಳನ್ನು ಕೂಡಲೇ ಪೋಸ್ಟ್ ಮಾಡಿಸುವ ಕ್ರಮ ಕೈಗೊಳ್ಳುತ್ತೇನೆ

ಇನ್ನು ಮಾನ್ಯ ವಿರೋಧಪಕ್ಷದ ಉಪನಾಯಕರು ಆದಂಥ ಮಾನ್ಯ ಸಿದ್ಧರವರು ಹೇಳಿದಂತೆ ಬೀದರ್‌ನಲ್ಲಿ ಕರುಳುಬೇನೆ ಪ್ರಕರಣದಲ್ಲಿ ೩ ಜನರು ಸತ್ತಿದ್ದಾರೆ. ಅಲ್ಲಿಯೂ ಕೂಡ ನಾವು ಮುಂಜಾಗರೂಕತೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅಷ್ಟೇ ಅಲ್ಲ, ಎಲ್ಲೆಲ್ಲಿ ಸಾಧ್ಯತೆಗಳಿವೆ ಅಲ್ಲೆಲ್ಲಾ ಸಂಬಂಧಪಟ್ಟ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಆದೇಶ ನೀಡಿ ಜಾಗ್ರತೆ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇವೆ.

ಶ್ರೀ ಜೆ. ಸಿ. ಮಧುಸ್ವಾಮಿ.—ಮಾನ್ಯ ಅಧ್ಯಕ್ಷರೆ, ಕಾಲರಾ ಬರುತ್ತಿರುವುದು ಈ ಹುಳಿಯಾರು ಭಾಗದಲ್ಲಿ ಹೊಸದೇನೂ ಅಲ್ಲ, ಮೊದಲನೇಸಾರಿಯೂ ಅಲ್ಲ. ಇದು ಸರ್ವೇ ಸಾಧಾರಣವಾಗಿ ಬರುತ್ತಲೇ ಇರುತ್ತದೆ ಇದರ ಬಗ್ಗೆ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕೆಂದು ಆರೋಗ್ಯ ಇಲಾಖೆಯವರಿಗೆ ಸುಮಾರು ೬-೭ ಪತ್ರಗಳನ್ನು ಬರೆದಿದ್ದೇನೆ. ಮಾವಿನಹಣ್ಣು - ಲಸಿನಹಣ್ಣು ಬರತಕ್ಕ ಕಾಲದಲ್ಲಿ ಸಾಮಾನ್ಯವಾಗಿ ಬಂದೇ ಬರುತ್ತದೆ. ಮಲೇರಿಯಾ ಬಗ್ಗೆ ಮಾನ್ಯ ಸಚಿವರು ಏನು ಹೇಳಿದರೂ ಅದು ಸತ್ಯಕ್ಕೆ ದೂರವಾದುದು. ಪ್ರತಿ ತಿಂಗಳೂ ಅಲ್ಲಿ ಸುಮಾರು ೧೦-೧೨ ಸಾವಿರ ಸ್ಯಾಂಪಲ್ಸ್ ತೆಗೆದುಕೊಳ್ಳುತ್ತಾರೆ. ನಾನು ಜಿಲ್ಲಾ ಪರಿಷತ್ತಿನ ಅಧ್ಯಕ್ಷನಾಗಿದ್ದಾಗ ನೋಡಿದ್ದೇನೆ. ಪ್ರತಿ ತಿಂಗಳೂ ಸುಮಾರು ೧೨ ಸಾವಿರ ಸ್ಯಾಂಪಲ್ಸ್‌ನ್ನು ತೆಗೆದುಕೊಂಡಿದ್ದರಲ್ಲಿ ಸುಮಾರು ೬-೭ ಸಾವಿರ ಪಾಸಿಟಿವ್ ಬರುತ್ತಿತ್ತು. ನಾನು ಈ ಬಗ್ಗೆ ಮಲೇರಿಯ ಅಧಿಕಾರಿಗಳಿಗೆ ಅನೇಕಸಾರಿ ಪತ್ರಗಳನ್ನು ಬರೆದು ಇದನ್ನು

ಸಂಪೂರ್ಣವಾಗಿ ಎರ್ರಾಡಿಕೇಟ್ ಮಾಡಲೇಬೇಕೆಂದು ತಿಳಿಸಿದ್ದೇನೆ. ಹುಳಿಯಾರು ಇಡೀ ಭಾರತದಲ್ಲಿ ಅತ್ಯಂತ ಹೆಚ್ಚಿಗೆ ಮಲೇರಿಯಾ ಇರತಕ್ಕ ಜಾಗ ಮತ್ತು ಪ್ರತಿವರ್ಷ ಇಲ್ಲಿ ಕಾಲರಾ ಕೂಡ ಬರುತ್ತಿರುತ್ತದೆ. ಆದ್ದರಿಂದ ಇಲ್ಲಿ ತಾವು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಬಹಳ ತೊಂದರೆಯಾಗುತ್ತದೆ. ಇದರ ಜೊತೆಗೆ ನಾಳೆ ೨೨ನೇ ತಾರೀಖು ಚಿಕ್ಕನಾಯ್ಕನಹಳ್ಳಿಯಲ್ಲಿ ವಿಕಾವಶಿ ಜಾತ್ರೆ ಕೂಡ ಪ್ರಾರಂಭವಾಗುತ್ತಿದೆ. ಇದನ್ನು ಯಾವುದೇ ಕಾರಣದಿಂದಲೂ ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ಅಲ್ಲೂ ಕೂಡ ಮುಂಜಾಗರೂಕತೆ ತೆಗೆದುಕೊಂಡು ಲಸಿಕೆಯನ್ನು ಹಾಕತಕ್ಕ ಕಾರ್ಯವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದರ ಬಗ್ಗೆ ಮುಂಜಾಗರೂಕತೆ ಕ್ರಮ ಕೈಗೊಳ್ಳುತ್ತೇವೆ. ಒಂದು ಸಾವಿರ ಮಂದಿ ಮಲೇರಿಯಾ ಪ್ರಕರಣಗಳಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆಂದು ಪತ್ರಿಕೆಗಳಲ್ಲಿ ಏನು ವರದಿ ಬಂದಿದೆ ಅದು ಸರಿಯಲ್ಲವೆಂದು ಹೇಳಿದೆ. ಆ ವರದಿಯಲ್ಲಿ ಸತ್ಯಾಂಶ ಇಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ.

ಶ್ರೀ ಜೆ. ಸಿ. ಮಂಜುನಾಥಸ್ವಾಮಿ.—ಹುಳಿಯಾರದಲ್ಲಿ ರೆಕಾರ್ಡ್ ಇದೆ.

ಅಧ್ಯಕ್ಷರು.—ಮಂತ್ರಿಗಳು ನೋಟ್ ಮಾಡಿಕೊಂಡಿದ್ದಾರೆ, ಬಿಡಿ

ವರದಿಯನ್ನೊಪ್ಪಿಸಂವುದು

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೂರನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಬಾಬುಗೌಡ ಆರ್. ಪಾಟೀಲ್.—ಖಾಸಗೀ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೂರನೆಯ ವರದಿಯನ್ನು ಸಭೆಯು ಒಪ್ಪುವುದೆಂದು ಭಾವಿಸುತ್ತೇನೆ.

ಸಭೆಯು ಒಪ್ಪಿಗೆ ನೀಡಿತು

ಗಮನ ಸೆಳೆಯುವ ಸೂಚನೆಗಳು

೧ ಮೈಸೂರು ನಗರದಲ್ಲಿ ರಾಮ ಜನ್ಮಭೂಮಿಯ ಮೆರವಣಿಗೆಯ ಸಂದರ್ಭದಲ್ಲಿ ಪ್ರಮುಖರ ಮೇಲೆ ಪೋಲೀಸರಿಂದ ಹಲ್ಲೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)—ಮಾನ್ಯ ಅಧ್ಯಕ್ಷರೇ ತಾರೀಖು ೨೨-೬-೧೯೯೦ರಂದು ಮೈಸೂರು ನಗರದಲ್ಲಿ ಶ್ರೀರಾಮ ಜನ್ಮಭೂಮಿಯ ಕುರಿತಾಗಿ ಮೆರವಣಿಗೆ ಹೊರಟಾಗ ಪೋಲೀಸರು ಕೆಲವು ಪ್ರಮುಖರ ಮೇಲೆ ಹಲ್ಲೆ, ನಡೆಸಿ ಗುಲ್ಬರ್ಗ ಜೈಲಿಗೆ ಕಳುಹಿಸಿದ್ದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ರಾಮಜನ್ಮಭೂಮಿ-ಬಾಬರಿ ಮಸೀದಿ ಪ್ರಕರಣವನ್ನು ಬಗೆಹರಿಸಲು ಕೇಂದ್ರ ಸರ್ಕಾರವು ವಿಫಲವಾದುದರ ವಿರುದ್ಧ ವಿಶ್ವ ಹಿಂದೂಪರಿಷತ್ತಿನ ಕೇಂದ್ರೀಯ ಘಟಕವು ರೂಪಿಸಿದ ಎರಡನೆಯ ಮತ್ತು ಪ್ರಮುಖ ಹಂತ ಕಾರ್ಯಕ್ರಮದ ಅಂಗವಾಗಿ ಅಯೋಧ್ಯೆಯಲ್ಲಿ ರಾಮಮಂದಿರವನ್ನು ಕಟ್ಟುವುದಕ್ಕೆ ಸಂಬಂಧಿಸಿದಂತೆ ಮೈಸೂರಿನ ಸ್ಥಳೀಯ ಹಿಂದೂ ಪರಿಷತ್ತಿನ ಪದಾಧಿಕಾರಿಗಳು ೫೦ ಮಂದಿ ದಿನಾಂಕ ೨೨-೬-೧೯೯೦ರಂದು ಕೆ. ಆರ್. ವೃತ್ತದ ತಾತಯ್ಯ ಪ್ರತಿಮೆಯ ಹತ್ತಿರ ಕೂಳಿತು ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಿಸಿ ಮೆರವಣಿಗೆ ಹೊರಡಲು ಯೋಚಿಸಿದ್ದರು. ೧೯೯೦ರ ಮೇ ಜೂನ್ ತಿಂಗಳಿನಲ್ಲಿ ಮೈಸೂರಿನಲ್ಲಿ ಕೋಮು ಗಲಭೆ ನಡೆದಿದ್ದುದರಿಂದ ಪರಿಸ್ಥಿತಿ ಗಂಭೀರವಾಗಿದ್ದು ಸಾಮಾನ್ಯ ವಾತಾವರಣವನ್ನು ತರಲು ಪೋಲೀಸರು ಪ್ರಯತ್ನಿಸುತ್ತಿದ್ದರು ಈ ರೀತಿಯ ಮೆರವಣಿಗೆಯನ್ನು ತೆಗೆದುಕೊಂಡು ಹೋದಲ್ಲಿ ಅದು ಶಾಂತಿಭಂಗ ಉಂಟು ಮಾಡಬಹುದೆಂದು ಮೈಸೂರಿನ ಪೋಲೀಸ್ ಕಮೀಷನರು ಭಾವಿಸಿದರು. ಆದುದರಿಂದ ಖಾಸಗಿ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ಹಾಗೂ ಜನರನ್ನು ರಕ್ಷಿಸಲು ಅವರು ಕರ್ನಾಟಕ ಪೋಲೀಸ್ ಕಾಯಿದೆ ೫೫ನೇ ಸೆಕ್ಷನ್ ಪ್ರಕಾರ